**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಎಸ್.ಸಿ.103/2023**

**ದಿನಾಂಕಃ 02.06.2026**

(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

**ಪ್ರಾ.ಸಾಃ 3 ಚಾ.ಸಾಃ 8**

| | | |
|---|---|---|
| **ಹೆಸರು** | ಃ | **ಯದುಕುಮಾರ್** |
| **ತಂದೆಯ ಹೆಸರು** | ಃ | **ನೀಲಹೆಗಡೆ** |
| **ವಯಸ್ಸು** | ಃ | **44 ವರ್ಷ** |
| **ಉದ್ಯೋಗ** | ಃ | **ಕೆ.ಎಸ್.ಆರ್.ಟಿ.ಸಿ. ಕಂಡಕ್ಟರ್** |
| **ವಾಸ ಸ್ಥಳ** | ಃ | **ಅಚ್ಚಲುದೊಡ್ಡಿ** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಈಗ ಸುಮಾರು 3-4 ವರ್ಷಗಳ ಹಿಂದೆ ನಾನು ತೋಟದ ಹತ್ತಿರ ಹೋಗುತ್ತಿದ್ದಾಗ ಮಂಜು ಅವರ ಮನೆಯ ಮುಂದುಗಡೆ ಪೊಲೀಸರು ನನ್ನನ್ನು ಕರೆದರು. ಸ್ಥಳವನ್ನು ತೋರಿಸಿದರು, ಇದಕ್ಕೆ ಸಂಬಂಧಪಟ್ಟಂತೆ ಮಹಜರ್ ಮಾಡುತ್ತಿದ್ದೇನೆ ಎಂದು ಹೇಳಿ ನನ್ನ ಸಹಿ ಪಡೆದರು. ಆ ಸಮಯದಲ್ಲಿ ಆಟೋ ಸುಟ್ಟು ಹೋದ ರೀತಿಯಲ್ಲಿ ಇತ್ತು. ಮನೆ ಸ್ವಲ್ಪ ಕಪ್ಪು ಆಗಿತ್ತು. ಸದರಿ ಸ್ಥಳಕ್ಕೆ ಸಂಬಂಧಪಟ್ಟಂತೆ ಪೊಲೀಸರು ಫೋಟೋ ತೆಗೆದಿದ್ದು, ಸದರಿ ಫೋಟೋ ನೋಡುತ್ತಿದ್ದು ನಿ.ಪಿ.2ರಿಂದ 8 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ನಿ.ಪಿ.10 ಮಹಜರ್ ನೋಡುತ್ತಿದ್ದೇನೆ. ಅದರಲ್ಲಿ ನನ್ನ ರುಜು ಇದ್ದು ನಿ.ಪಿ.10(ಬಿ)

ಎಂದು ಗುರುತಿಸಿರುತ್ತಾರೆ. ಸಾಕ್ಷಿ ರೇವಣ್ಣ ಇವರು ಮೃತಪಟ್ಟಿರುತ್ತಾರೆ. ಪೊಲೀಸರು ಮಧ್ಯಾಹ್ನ ಬಂದಿದ್ದರು. 1ರಿಂದ 2 ತಾಸು ಸ್ಥಳದಲ್ಲಿ ಇದ್ದರು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಶ್ರೀ. ಎಲ್.ಎ., ವಕೀಲರಿಂದಃ**

ನಿ.ಪಿ.10 ಮಹಜರ್ ನಲ್ಲಿ ಬರೆದಂತಹ ವಿಚಾರ ನನಗೆ ಗೊತ್ತಿಲ್ಲ. ನಾನು ಮಹಜರ್ ಗೆ ಠಾಣೆಯಲ್ಲಿ ರುಜು ಮಾಡಿರುತ್ತೇನೆ ಎನ್ನುವುದು ಸುಳ್ಳು. ಸ್ಥಳದ ಚಕ್ಕುಬಂದಿ ಗೊತ್ತಿಲ್ಲ. ನಿ.ಪಿ.2ರಂದ 8 ಫೋಟೋಗಳನ್ನು ನನ್ನ ಸಮಕ್ಷಮ ತೆಗೆದಿರುವುದಿಲ್ಲ. ಪೊಲೀಸರು ನನ್ನನ್ನು ಸ್ಥಳಕ್ಕೆ ಕರೆದಿಲ್ಲ, ನನ್ನ ಸಮಕ್ಷಮ ನಿ.ಪಿ.10 ಮಹಜರ್ ಮಾಡಿಲ್ಲ, ನಿ.ಪಿ.2ರಿಂದ 8 ಫೋಟೋ ತೆಗೆದಿಲ್ಲ, ಪಿರ್ಯಾದಿಗೆ ಸಹಾಯ ಮಾಡುವ ಸಲುವಾಗಿ ಪೊಲೀಸರ ಮಾತು ಕೇಳಿಕೊಂಡು ಆರೋಪಿ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಎಂ.ಹೆಚ್. ಅಣ್ಣಯ್ಯನವರ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**